**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/41/ಇಎಸ್‌ಟಿ(2)ಎ/2014

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:29-08-2015.

**ಸುತ್ತೋಲೆ**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ನಿರ್ದೇಶನಾಲಯ/ಸರ್ಕಾರಿ ಪಾಲಿಟೆಕ್ನಿಕ್/ಇಂಜನಿಯರಿಂಗ್ ಕಾಲೇಜು/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳನ್ನು ವಲಯ-ಎ, ವಲಯ-ಬಿ ವಲಯ-ಸಿ ಗಳಾಗಿ ವಿಂಗಡಿಸುವ ಬಗ್ಗೆ.

ಉಲ್ಲೇಖ 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 75 ಶಾಸನ 2012, ಬೆಂಗಳೂರು ದಿ: 06.02.2013
2. ನಿರ್ದೇಶನಾಲಯದ ಪತ್ರ ಸಂಖ್ಯೆ:ಡಿಟಿಇ/09/ಇಎಸ್‌ಟಿ(2)ಎ/2014 ದಿ:23-07-2014
3. ನಿರ್ದೇಶನಾಲಯದ ಪತ್ರ ಸಂಖ್ಯೆ:ಡಿಟಿಇ/41/ಇಎಸ್‌ಟಿ(2)ಎ/2014 ದಿ:26-05-2015 ಮತ್ತು 20-08-2015

*-*-*.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗಾವಣೆ ನಿಯಂತ್ರಿಸುವ ಸಲುವಾಗಿ ಹೊರಡಿಸಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆ ವರ್ಗಾವಣೆ ನಿಯಂತ್ರಣ) ಕಾಯ್ದೆ 2012ನ್ನು ದಿನಾಂಕ: 01-04-2014ರಿಂದ ಅಧಿಕೃತವಾಗಿ ಜಾರಿಗೆತರಲಾಗಿದೆ. ಈ ಹಿನ್ನಲೆಯಲ್ಲಿ ಅಧಿನಿಯಮದ ಕಾಯ್ದೆ ಸೆಕ್ಷನ್ 2(ಎನ್)(i ii ii)ರನ್ವಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಛೇರಿ ಹಾಗೂ ಕಾಲೇಜುಗಳನ್ನು ವಲಯ-ಎ, ಬಿ, ಸಿ ಗಳಾಗಿ ವಿಂಗಡಿಸಿ, ಉಲ್ಲೇಖ (2) ಮತ್ತು (3)ರ ಸುತ್ತೋಲೆಗಳೊಂದಿಗೆ ಪ್ರಕಟಿಸಲಾಗಿರುತ್ತದೆ. ಪೌರಾಡಳಿತ ನಿರ್ದೇಶನಾಲಯವು ರಬಕವಿ-ಬನಹಟ್ಟಿ ಪ್ರದೇಶವನ್ನು ನಗರಸಭೆಯಾಗಿ ಉನ್ನತೀಕರಿಸಿರುವುದರಿಂದ ಸದರಿ ಪ್ರದೇಶದಲ್ಲಿನ ಸರ್ಕಾರಿ ಇಂಜನಿಯರಿಂಗ್/ಪಾಲಿಟೆಕ್ನಿಕ್ ಸಂಸ್ಥೆಗಳನ್ನು ವರ್ಗಾವಣೆ ಅಧಿನಿಯಮದನ್ವಯ **ವಲಯ-ಬಿ ಪಟ್ಟಿಯಿಂದ ವಲಯ-ಎ** ಪಟ್ಟಿಗೆ ಸೇರಿಸಿ ಪರಿಷ್ಕರಿಸಿ ಪ್ರಕಟಿಸಲಾಗಿದೆ.

**ನಿರ್ದೇಶಕರು**

**ಇವರಿಗೆ:**

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ ಇಂಜನಿಯರಿಂಗ್ ಕಾಲೇಜು/ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರು.

**ಪ್ರತಿ;**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು-01
2. ಎಲ್ಲಾ ಜಂಟಿ ನಿರ್ದೇಶಕರು/ ಆಡಳಿತಾಧಿಕಾರಿ/ ಸಹಾಯಕ ಆಡಳಿತಾಧಿಕಾರಿಗಳು/ ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದಶನಾಲಯ, ಬೆಂಗಳೂರು
3. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ನಿರ್ದೇಶಕರ ಆಪ್ತಶಾಖೆ.
5. ಕಛೇರಿ ಪ್ರತಿ.